## 10. ನಾಡು ಕಟ್ಟುವವರ ನಡುವೆ ದಕ್ಷ ಸಮುದಾಯ

1916 ನವೆಂಬರ್ 20 ರಂದು ಬ್ರಿಟಿಷ್ ಚಕ್ರಾಧಿಪತ್ಯದ ಭಾಗವಾಗಿದ್ದ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಜಸ್ಟೀಸ್ ಪಾರ್ಟಿ ಎನ್ನುವ ರಾಜಕೀಯ ಸಂಘಟನೆಯೊಂದು ಆರಂಭಗೊಂಡಿತ್ತು. ರಾಜಕಾರಣವೂ ಸೇರಿದಂತೆ ಆಡಳಿತ ವ್ಯವಸ್ಥೆಯ ಉನ್ನತ ಸ್ಥಾನಗಳಲ್ಲಿ ಬ್ರಾಹ್ಮಣ ಸಮುದಾಯವೇ ಪ್ರಭುತ್ವ ಸಾಧಿಸಿದೆ. ಆ ಬ್ರಾಹ್ಮಣರಿಗೆ ಅವಕಾಶವೇ ಇಲ್ಲ. ಪ್ರಸಕ್ತ ಹಿನ್ನೆಲೆಯಲ್ಲಿ ಅ ಬ್ರಾಹ್ಮಣರಿಗೆ ಸಾರ್ವಜನಿಕ ಬದುಕಿನ ಎಲ್ಲಾ ನೆಲೆಗಳಲ್ಲಿ ನ್ಯಾಯಾಯುತ ಅವಕಾಶ ದೊರೆಯಬೇಕು ಎನ್ನುವ ಬೇಡಿಕೆಯೊಡನೆ ಆರಂಭಗೊಂಡದ್ದೇ ಜಸ್ಟೀಸ್ ಪಾರ್ಟಿ. ಡಾ: ಸಿ ನಟೇಸ ಮೊದಲಿಯಾರ್, ತ್ಯಾಗರಾಜ ಚೆಟ್ಟಿ, ಟಿ. ಎಂ. ನಟೇಸನ್, ಇ.ವಿ. ರಾಮಸ್ವಾಮಿ ನಾಯ್ಕರ್ ಮುಂತಾದವರು ಪಾರ್ಟಿಯನ್ನು ಹುಟ್ಟು ಹಾಕಿದರು. ಇದು ಹೆಚ್ಚು ಕಡಿಮೆ ಮೈಸೂರು ರಾಜ್ಯವೂ ಸೇರಿದಂತೆ ದಕ್ಷಿಣ ಭಾರತದಾದ್ಯಂತ ಬ್ರಾಹ್ಮಣ ವಿರೋಧಿ ಅಂದೋಲನವನ್ನು ಯಶಸ್ವಿಯಾಗಿ ಸಂಘಟಿಸಿತ್ತು . ಜಸ್ಟಿಸ್ ಪಾರ್ಟಿಯ ಸ್ಥಾಪಕರ ಉದ್ದೇಶ ಆಶಯಗಳೇನೇ ಇರಬಹುದು, ಕರ್ನಾಟಕದ ಮಟ್ಟಿಗೆ ಬ್ರಾಹ್ಮಣ ಸಮುದಾಯ ದಕ್ಷತೆ, ಪ್ರಾಮಾಣಿಕತೆ ಮತ್ತು ಸಮರ್ಪಣಾ ಮನೋಭಾವದಿಂದ ನಾಡು ಕಟ್ಟುವ ಕಾಯಕದಲ್ಲಿ ಮಹತ್ವದ ಕೊಡುಗೆ ನೀಡಿರುವುದು ಸತ್ಯ.

ಹರಿದು ಹಂಚಿಹೋಗಿದ್ದ ಕರ್ನಾಟಕ ಒಂದುಗೂಡುವುದಕ್ಕೆ ಮೊದಲು ಅವರವರದೇ ಭೌಗೋಳಿಕ ನೆಲೆಗಳಲ್ಲಿ ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಸರ್ವಮಾನ್ಯ ಆಡಳಿತಗಾರರಲ್ಲಿ ದಿವಾನ್ ಪೂರ್ಣಯ್ಯ ಮೊದಲಿಗರು. ಕೊಯಮತ್ತೂರಿನಲ್ಲಿ ಜನಿಸಿದ್ದ ಪೂರ್ಣಯ್ಯ , ಹೈದರಾಲಿ, ಟಿಪ್ಪು ಸುಲ್ತಾನ್ ಆಡಳಿತಾವಧಿಯಲ್ಲಿ ದಿವಾನರಾಗಿ ಕಾರ್ಯನಿರ್ವಹಿಸಿದ್ದರು. 1799ರ ನಾಲ್ಕನೇ ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನ್ ಮಡಿದ ನಂತರ ಮೈಸೂರೂ ರಾಜ್ಯದ ಅಧಿಕಾರ ಸೂತ್ರ ಹಿಡಿದ ಮಹಾರಾಣಿ ಲಕ್ಷ್ಮೀ ಅಮ್ಮಣಿಯವರ ದಿವಾನರಾಗಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರ್, ಆಗಿನ್ನೂ ಅಪ್ರಾಪ್ತರಾಗಿದ್ದದರಿಂದ ಅವರಿಗೆ ಬಾಲ್ಯದಿಂದಲೇ ಆಡಳಿತ ತರಬೇತಿ ನೀಡಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರ್ ಪ್ರೌಢಾವಸ್ಥೆ ತಲುಪಿ ಅಧಿಕಾರ ಸೂತ್ರ ಹಿಡಿದ ಒಂದೆರಡು ವರ್ಷಗಳ ನಂತರ ದಿವಾನ್ ಪೂರ್ಣಯ್ಯ ನಿವೃತ್ತಿ ಹೊಂದಿದ್ದರು. ತಮ್ಮ ಇಪ್ಪತ್ತೊಂಭತ್ತು ವರ್ಷಗಳ ಆಡಳಿತಾವಧಿಯಲ್ಲಿ ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ದಿಗೆ ಮಹತ್ವದ ಕೊಡುಗೆಗಳನ್ನು ನೀಡಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರ್ ಉತ್ತರಾಧಿಕಾರಿಯಾಗೀ ಅಧಿಕಾರ ಸೂತ್ರ ಹಿಡಿದ ಚಾಮರಾಜ ಒಡೆಯರ್ ಅವರಿಗೆ ಮೊತ್ತಮೊದಲ ದಿವಾನರಾಗಿದ್ದವರು, ರಂಗಾಚಾರ್ಲು ಇವರ ಆಡಳಿತಾವಧಿಯಲ್ಲಿಯೇ ಮೈಸೂರಿನ ರಾಜಪ್ರಭುತ್ವ ಜನ ಪ್ರಭುತ್ವಕ್ಕೆ ನಾಂದಿ ಹಾಡಿತ್ತು. ಆಖಂಡ ಭಾರತದಲ್ಲಿ ಪ್ರಪ್ರಥಮ ಬಾರಿಗೆ ಪ್ರಜಾಪ್ರತಿನಿಧಿ ಸಭೆ ಎನ್ನುವ ಪರಿಕಲ್ಪನೆ ಮೈಸೂರು ರಾಜ್ಯದಲ್ಲಿ ಸಾಕಾರಗೊಂಡಿತ್ತು. ರಂಗಾಚಾರ್ಲು ನಿಧನ ಹೊಂದಿದ ನಂತರ ದಿವಾನರಾಗಿ ಅಧಿಕಾರ ಸೂತ್ರ ಹಿಡಿದವರು ಶೇಷಾದ್ರಿ ಆಯ್ಯರ್. ಹದಿನೆಂಟು (1883–1901) ವರ್ಷಗಳ ಸುದೀರ್ಘ ಅವಧಿ ಆಡಳಿತ ನಡೆಸಿದ ಹೆಗ್ಗಳಿಕೆ ಇವರದು. ನವ ಬೆಂಗಳೂರು ನಿರ್ಮಾತೃ ಎನ್ನುವ ಖ್ಯಾತಿ ಗಳಿಸಿದ ಶೇಷಾದ್ರಿ ಆಯ್ಯರ್ ಆಡಳಿತಾವಧಿಯಲ್ಲಿ ಕೋಲಾರ ಚಿನ್ನದ ಗಣಿ ಪ್ರಾರಂಭ ಆಯಿತು. ಬೆಂಗಳೂರಿನಲ್ಲಿ ವಿಕ್ಟೋರಿಯಾ ಆಸ್ಪತ್ರೆ, ಶಿವನಸಮುದ್ರದಲ್ಲಿ ಏಷ್ಯಾ ಖಂಡದ ಪ್ರಥಮ ಜಲವಿದ್ಯುತ್ ಕೇಂದ್ರ. ಚಿತ್ರದುರ್ಗದಲ್ಲಿ ವಾಣಿ ವಿಲಾಸ ಸಾಗರ ಸ್ಥಾಪನೆಯೂ ಸೇರಿದಂತೆ ಆನೇಕ ಜನಪರ ಯೋಜನೆಗಳನ್ನು ಜಾರಿಗೊಳಿಸಿದ್ದರು. ಇವರ ನಿವೃತ್ತಿಯ ನಂತರ ವಿ.ಪಿ. ಮಾಧವ ರಾವ್, ಟಿ ಅನಂದ ರಾವ್ ದಿವಾನರಾಗಿದ್ದರು.

ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ದಿಗೆ ಪೂರಕವಾಗಿ ಸ್ಪಂದಿಸುವ ಸಮರ್ಥ ಆಡಳಿತಗಾರನೊಬ್ಬನ ಹುಡುಕಾಟದಲ್ಲಿ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿದ್ದರು. ಅದೇ ಸಂದರ್ಭದಲ್ಲಿ ಮದ್ರಾಸ್ ಪ್ರೆಸಿಡೆನ್ಸಿಯ ತಮಿಳು ಬ್ರಾಹ್ಮಣರಿಗೇ ಮೈಸೂರು ದಿವಾನರಾಗುವ ಅವಕಾಶ ದೊರೆಯುತ್ತಿದೆ. ಮೈಸೂರು ರಾಜ್ಯದ ಕನ್ನಡಿಗ ಬ್ರಾಹ್ಮಣರಿಗೆ ದೊರೆಯುತ್ತಿಲ್ಲ ಎನ್ನುವ ಗೊಣಗಾಟ ಆರಂಭವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ 1909ರಲ್ಲಿ ಮೊದಲು ಮೈಸೂರು ರಾಜ್ಯದ ಚೀಫ್ ಎಂಜಿನಿಯರ್ ಆಗಿ ನಂತರ 1912ರಲ್ಲಿ ದಿವಾನರಾಗಿ ಅಧಿಕಾರ ಸೂತ್ರ ಹಿಡಿದವರು ಮೋಕ್ಷಗುಂಡಂ ವಿಶ್ವೇಶ್ವರಯ್ಯ, Industrialise or Perish ಎನ್ನುವ ಘೋಷವಾಕ್ಯದೊಡನೆ ಕ್ರಿಯಾಶೀಲರಾದ ವಿಶ್ವೇಶ್ವರಯ್ಯ ನೀರಾವರಿ, ವಿದ್ಯುತ್, ಶಿಕ್ಷಣ, ಮೂಲಭೂತ ಸೌಕರ್ಯ, ಕೈಗಾರಿಕೆ ಹೀಗೆ ಎಲ್ಲಾ ಕ್ಷೇತ್ರಗಳ ಅಭಿವೃದ್ದಿಗೆ ವಿಶೇಷ ಅದ್ಯತೆ ನೀಡುವ ಮೂಲಕ ಮೈಸೂರು ರಾಜ್ಯವನ್ನು ಮಾದರಿ ರಾಜ್ಯವನ್ನಾಗಿಸಿದ್ದರು. ಕೃಷ್ಣರಾಜ ಸಾಗರ ಕಟ್ಟಿಣ ಮತ್ತು ಉಕ್ಕು ಕಾರ್ಖಾನೆ, ಮೈಸೂರು ವಿಶ್ವ ವಿದ್ಯಾಲಯ, ಮೈಸೂರು ಬ್ಯಾಂಕ್, ಎಂಜಿನಿಯರಿಂಗ್ ಕಾಲೇಜು, ಇಂಡಿಯನ್ ಇನ್ಸ್ ಟಿಟ್ಯೂಟ್

ಆಫ್ ಸೈನ್ಸ್, ರೈಲ್ವೇ ಅಭಿವೃದ್ಧೀ ಹೀಗೆ ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿಯ ಪರ್ವ ವಿಶ್ವೇಶ್ವರಯ್ಯನವರಿಂದ ಆರಂಭಗೊಂಡಿತ್ತು. 1919ರಲ್ಲಿ ಅವಕಾಶ ವಂಚಿತರಿಗೆ ಮೀಸಲಾತಿ ನೀಡಬೇಕು ಎನ್ನುವ ವಿಷಯದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜೊತೆ ಸೃಷ್ಟಿಯಾದ ಸೈದ್ಧಾಂತಿಕ ಭಿನ್ನಮತದ ಪರಿಣಾಮ ವಿಶ್ವೇಶ್ವರಯ್ಯನವರು ದಿವಾನ್ ಪದವಿಗೆ ರಾಜೀನಾಮೆ ನೀಡಿದ್ದರು. ನಂತರ, ಎನ್. ಮಾಧವರಾವ್ ಅವರು ದಿವಾನರಾಗಿದ್ದರು.

ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಆಖಂಡ ಕರ್ನಾಟಕ ರಚನೆಗಾಗಿ ಬ್ರಾಹ್ಮಣ ಸಮುದಾಯದ ಅಗ್ರಗಣ್ಯರು ತಮ್ಮ ಬದುಕನ್ನೇ ಮುಡುಪಾಗಿಸಿಕೊಂಡಿದ್ದರು. 1890ರಲ್ಲಿಯೇ ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಸ್ಥಾಪಿಸಿದ ರಾ.ಹ. ದೇಶಪಾಂಡೆಯವರಿಂದ ಆರಂಭಗೊಂಡು, ಕನ್ನಡ ಕುಲಪುರೋಹಿತ ಆಲೂರು ವೆಂಕಟರಾವ್ ಅವರಿಂದ ಮುಂದುವರಿದು, ಶ್ರೀರಂಗಸ್ವಾಮಿ, ರಮಾನಂದ ತೀರ್ಥ, ದಿಗಂಬರ್ ರಾವ್ ಕಲ್ಮಣಕರ್, ಗಂಗಾಧರ ರಾವ್ ದೇಶಪಾಂಡೆ, ರಂಗನಾಥ ರಾಮಚಂದ್ರ ದಿವಾಕರ, ಕಪಟರಾಳ ಕೃಷ್ಣರಾವ್, ಕೆ. ಆರ್. ಕಾರಂತ, ಕಡಪಾ ರಾಘವೇಂದ್ರ ರಾವ್, ಶಾಮರಾವ್ ವಿಠಲ ಕೈಕಿಣಿ, ದಿನಕರ ದೇಸಾಯಿ, ರೊದ್ದಶ್ರೀನಿವಾಸ ರಾವ್, ಮುದವೀಡು ಕೃಷ್ಣರಾವ್, ಹಾರ್ನಳ್ಳಿ ರಾಮಸ್ವಾಮಿ ಹೀಗೆ ಇನ್ನೂ ಆನೇಕ ಬ್ರಾಹ್ಮಣ ಸಮುದಾಯದ ಆಗ್ರಗಣ್ಯರು ಹಿಂದಿನ ಹೈದರಾಬಾದ್ ಕರ್ನಾಟಕ ಮತ್ತು ಮುಂಬೈ ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟ ಮತ್ತು ಏಕೀಕರಣ ಕಿಚ್ಚನ್ನು ಜೀವಂತವಾಗಿರಿಸಿದರು.

ಸ್ವಾತಂತ್ರ್ಯ ನಂತರ ಪಂಡಿತ್ ನೆಹರು ರಚಿಸಿದ ಜವಾಬ್ದಾರಿ ಸರ್ಕಾರದಲ್ಲಿ ಅಪ್ಪಟ ಗಾಂಧಿವಾದಿ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದ್ದ ರಂಗನಾಥ ರಾಮಚಂದ್ರ ದಿವಾಕರ್ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವರಾಗಿದ್ದರು. ಸಂವಿಧಾನ ರಚನಾ ಸಮಿತಿಯ ಸದಸ್ಯರೂ ಆಗಿದ್ದರು. ಮುಂಬೈ ರಾಜ್ಯದಿಂದ ರಾಜ್ಯ ಸಭೆಗೆ ಆಯ್ಕೆಗೊಂಡಿದ್ದರು. ಮೈಸೂರು ರಾಜ್ಯದಲ್ಲಿ ಕೆ. ಚೆಂಗಲರಾಯ ರೆಡ್ಡಿಯವರ ಸರ್ಕಾರದಲ್ಲಿ ಕೆ.ಟಿ. ಭಾಷ್ಯಂ ಆಯ್ಯಂಗಾರ್, ಕೆಂಗಲ್ ಹನುಂಮಂತಯ್ಯನವರ ಸರ್ಕಾರದಲ್ಲಿ ಎ.ಜಿ. ರಾಮಚಂದ್ರ ರಾವ್ ಏಕೀಕರಣದ ನಂತರ ರಚನೆಗೊಂಡ ನಿಜಲಿಂಗಪ್ಪನವರ ಸಂಪುಟದಲ್ಲಿ ಜಗನ್ನಾಥ್ ರಾವ್ ಚಂದ್ರಿಕೆ ಎಂ.ವಿ. ರಾಮರಾವ್, ಬಸಪ್ಪ ದಾನಪ್ಪ ಜತ್ತಿಯವರ ಸಂಪುಟದಲ್ಲಿ ತಾಳಿಕೆರೆ ಸುಬ್ರಹ್ಮಣ್ಯ ಸಚಿವರಾಗಿದ್ದರು. ಆರವತ್ತರ ದಶಕದ ಅವಧಿಯಲ್ಲಿ ಬ್ರಾಹ್ಮಣ ಸಮುದಾಯದ ಅತ್ಯಂತ ವರ್ಣರಂಜಿತ ರಾಜಕಾರಣಿ ಆಗಿದ್ದವರು ರಾಮಕೃಷ್ಣ ಹೆಗಡೆ, ನಿಜಲಿಂಗಪ್ಪ ಮತ್ತು ವೀರೇಂದ್ರ ಪಾಟೀಲರ ಸಂಪುಟದಲ್ಲಿ ಹೆಚ್ಚುಕಡಿಮೆ ಹತ್ತು ವರ್ಷ ಅತ್ಯಂತ ಪ್ರಭಾವಿ ಸಚಿವರಾಗಿದ್ದ ಹೆಗಡೆ, ನಿಜಲಿಂಗಪ್ಪನವರ ನೀಲಿಕಣ್ಣಿನ ಹುಡುಗ ಆಗಿದ್ದರು. ತುರ್ತು ಪರಿಸ್ಥಿತಿ ವಿರೋಧಿಸಿ ಜೈಲುವಾಸ ಅನುಭವಿಸಿದ್ದರು. ನಂತರ ಜನತಾಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಆಗಿದ್ದರು. 1983 ಮತ್ತು 1985 ರಲ್ಲಿ ಎರಡು ಬಾರಿ ಕರ್ನಾಟಕ ಮುಖ್ಯಮಂತ್ರಿಯಾಗಿದ್ದರು. ಕೇಂದ್ರ ಸಚಿವರಾಗಿದ್ದರು, ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದರು. ಮೌಲ್ಯಧಾರಿತ ರಾಜಕಾರಣಕ್ಕೆ ಒತ್ತು ನೀಡಿದ್ದ ಹೆಗಡೆ, 1988ರಲ್ಲಿ ಟೆಲಿಫೋನ್ ಕದ್ದಾಲಿಕೆ ಪ್ರಕರಣ ನೈತಿಕ ಹೊಣೆಗಾರಿಕೆ ಹೊತ್ತು ಮುಖ್ಯಮಂತ್ರಿ ಪದತ್ಯಾಗ ಮಾಡಿದ್ದರು, ಹೆಗಡೆಯವರ ರೀತಿಯಲ್ಲಿಯೇ ಮಧುಗಿರಿಯಲ್ಲಿ ಕೃಷಿಕರು, ಕೃಷಿ ಕಾರ್ಮಿಕರ ಹೆಣ್ಣು ಮಕ್ಕಳ ಮೇಲೆ ಪೊಲೀಸರು ನಡೆಸಿದ ದೌರ್ಜನ್ಯದ ನೈತಿಕ ಹೊಣೆಗಾರಿಕೆ ಹೊತ್ತು ನಿಜಲಿಂಗಪ್ಪನವರ ಸಂಪುಟದಲ್ಲಿ ಗೃಹ ಸಚಿವರಾಗಿದ್ದ ಎಂ.ವಿ. ರಾಮರಾವ್ ಸಚಿವ ಪದವಿಗೆ ರಾಜೀನಾಮೆ ನೀಡಿದ್ದರು.

ಎಪ್ಪತ್ತರ ದಶಕದಲ್ಲಿ ದೇವರಾಜ ಅರಸು ಸಂಪುಟದಲ್ಲಿ ಬದರಿ ನಾರಾಯಣ ಆಯ್ಯಂಗಾರ್, ಗುಂಡೂರಾವ್ ಮತ್ತು ಕೆ. ಹೆಚ್. ಶ್ರೀನಿವಾಸ್ ಸಂಪುಟ ದರ್ಜೆ ಸಚಿವರಾಗಿದ್ದರು. ಗುಂಡೂರಾವ್ ಶಾಸಕರಾಗಿ ಆಯ್ಕೆಗೊಂಡ ಎಂಟು ವರ್ಷಗಳ ಅವಧಿಯಲ್ಲಿಯೇ ಮುಖ್ಯಮಂತ್ರಿ ಗಾದಿಗೇರಿದ್ದರು. ಕರ್ನಾಟಕದಲ್ಲಿ ಬ್ರಾಹ್ಮಣರು ಮುಖ್ಯಮಂತ್ರಿ ಆಗಲು ಸಾಧ್ಯವೇ ಇಲ್ಲ ಎನ್ನುವಂತಿದ್ದ ನಂಬಿಕೆಯನ್ನು ಸುಳ್ಳು ಮಾಡಿ ಇಂದಿರಾ ಗಾಂಧಿ ಆಶೀರ್ವಾದದಿಂದ ಮುಖ್ಯಮಂತ್ರಿ ಗಾದಿಗೇರಿದ್ದರು. ಆಷ್ಟೇ ಬೇಗ ಆನೇಕ ವಿವಾದಾತ್ಮಕ ನಿರ್ಧಾರಗಳಿಂದ ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರ ಕಳೆದುಕೊಂಡು, ಪ್ರಥಮ ಕಾಂಗ್ರೆಸ್ಸೇತರ ಸರ್ಕಾರ ಬರಲು ಕಾರಣಕರ್ತರಾದರು. 1989ರಲ್ಲಿ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಸಂಸತ್ ಪ್ರವೇಶಿಸಿದ್ದರು. ಬ್ರಾಹ್ಮಣ ಸಮುದಾಯದ ರಾಜಕಾರಣಿಗಳಲ್ಲಿ ಪ್ರಸ್ತಾಪಿಸಲೇ ಬೇಕಾದ ಇನ್ನೊಂದು ಹೆಸರು ಆರ್. ವಿ. ದೇಶಪಾಂಡೆ, ರಾಮಕೃಷ್ಣ ಹೆಗಡೆಯವರ ಕೃಪಾಕಟಾಕ್ಷದಿಂದ ರಾಜಕಾರಣದ ಅಂಗಳ ಪ್ರವೇಶಿಸಿದವರು ದೇಶಪಾಂಡೆ 1986 ರಲ್ಲಿ ಮಿನಿಸ್ಟರ್ ಆಫ್ ಸ್ಟೇಟ್ ಆಗಿ ಹೆಗಡೆ ಸಂಪುಟ ಪ್ರವೇಶಿಸಿ ಬೊಮ್ಮಾಯಿ, ದೇವೇಗೌಡ, ಜೆ.ಹೆಚ್.ಪಟೇಲ್, ಎಸ್.ಎಂ.ಕೃಷ್ಣ, ಧರ್ಮಸಿಂಗ್, ಸಿದ್ಧರಾಮಯ್ಯನವರ ಸಂಪುಟದವರೆಗೆ ಏಳು ಸಂಪುಟಗಳಲ್ಲಿ

ಇಪ್ಪತ್ತೆರಡು ವರ್ಷಗಳಿಗೂ ಹೆಚ್ಚು ಕಾಲ ಸಚಿವರಾಗಿದ್ದು ದಾಖಲೆ. ಎಸ್. ಎಂ. ಕೃಷ್ಣ, ಸಂಪುಟದಲ್ಲಿ ಬಿ.ಕೆ. ಚಂದ್ರಶೇಖರ್ ಸಚಿವರಾಗಿದ್ದರು. ಸದ್ಯ ಕೇಂದ್ರದಲ್ಲಿ ಪ್ರಹ್ಲಾದ್ ಜೋಷಿ, ಯಡಿಯೂರಪ್ಪನವರ ಸರ್ಕಾರದಲ್ಲಿ ಸುರೇಶ್ ಕುಮಾರ್ ಸಚಿವರಾಗಿದ್ದರೆ, ವಿಶ್ವೇಶ್ವರ ಹೆಗಡೆ ಕಾಗೇರಿ ಸ್ಪೀಕರ್ ಆಗಿದ್ದಾರೆ. ಇವರ ಜೊತೆಗೆ ಎರಡು ಅವಧಿಗೆ ರಮೇಶ್ ಕುಮಾರ್, ಒಂದು ಅವಧಿ ವೈಕುಂಠ ಬಾಳಿಗ ವಿಧಾನ ಸಭೆಯ ಸ್ಪೀಕರ್ ಆಗಿದ್ದರು. ಡಿ.ಬಿ. ಕಲ್ಮಣಕರ್ ವಿಧಾನ ಪರಿಷತ್ ಸಭಾಪತಿ ಆಗಿದ್ದರು.

ಕರ್ನಾಟಕ ಕಂಡ ಬ್ರಾಹ್ಮಣ ಸಮುದಾಯದ ಇನ್ನೊಬ್ಬ ವರ್ಣರಂಜಿತ ರಾಜಕಾರಣಿ ಅನಂತಕುಮಾರ್, ರಾಷ್ಟ್ರೀಯ ಸ್ವಯಂ ಸೇವಕ ಸಂಘದಿಂದ ರೂಪುಗೊಂಡ ಅನಂತಕುಮಾರ್, ಕರ್ನಾಟಕದಲ್ಲಿ ಭಾಜಪ ಕಟ್ಟುವ ಪ್ರಕ್ರಿಯೆಯಲ್ಲಿ ಯಡಿಯೂರಪ್ಪನವರಿಗೆ ಹೆಗಲಿಗೆ ಹೆಗಲಾಗಿ ದುಡಿದವರು. 1996 ರಿಂದ 2014ರವರೆಗೆ ಬೆಂಗಳೂರೂ ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಸತತ ಆರು ಬಾರಿ ಲೋಕಸಭಾ ಸದಸ್ಯರಾಗಿದ್ದರು. 1998 ರಿಂದ 2019ರವರೆಗೆ ನರೇಂದ್ರ ಮೋದಿಯವರ ಸಂಪುಟದಲ್ಲಿ ಸಚಿವರಾಗಿದ್ದರು. ದಕ್ಷ ಹಾಗೂ ಚಾಣಾಕ್ಷ ರಾಜಕಾರಣಿ ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಿದ್ದ ಅನಂತ ಕುಮಾರ್ 2004 ರಲ್ಲಿ ಭಾಜಪ ರಾಜಾಧ್ಯಕ್ಷರಾಗಿದ್ದರು. ಕರ್ನಾಟಕದ ಮುಖ್ಯಮಂತ್ರಿ ಆಗುವ ಮಹತ್ವಾಕಾಂಕ್ಷೆ ಅವರಿಗಿತ್ತು. 2004ರಲ್ಲಿ ಭಾಜಪಗೆ ಬಹುಮತ ಬಂದಿದ್ದರೆ, ಅನಂತ ಕುಮಾರ್ ಕರ್ನಾಟಕದ ಮೂರನೇ ಬ್ರಾಹ್ಮಣ ಮುಖ್ಯಮಂತ್ರಿ ಆಗುತ್ತಿದ್ದರು. ಅವರ ಮಹಾತ್ವಾಕಾಂಕ್ಷೆ ಈಡೇರಲಿಲ್ಲ.

ಲೇಖಕರು ಮಹದೇವ್ ಪ್ರಕಾಶ್,
ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರು
ಆಧಾರ: ವಿಜಯ ಕರ್ನಾಟಕ, ದಿನಾಂಕ:24.06.2020